ತೂಗೋ ಕಂದೀಲಂತಹ ಚಂದ್ರನ್ನೇ ನೋಡಿಕೊಂಡಿದ್ದರು. ಎಂದಿನದೇ ಕತೆ ಅಲ್ಲವಾ ಅಂತ, ನಾನೇ ಎದ್ದು ಹೋಗಿ ಮಲೀಕ್ಕೊಂಡೆ...'

ರೇಣುಯುಕ್ತಿ ಶರಣಪ್ಪನ ಮಾತನ್ನು ಕೇಳಿಸಿಕೊಳ್ಳುತ್ತಲೇ, ಅನಾಮತ್ತು ಜಲಸಮಾಧಿ ಹೋದ ಆರ್ಥರ್ ಡೇವಿಡ್ ಹ್ಯೂಸ್ನ ಶರೀರವನ್ನು ನೋಡಿಕೊಂಡುಳಿದಳು. ನಿದ್ದೆಯಲ್ಲಿ ಮಿದ್ದು ಮುಚ್ಚಿದ್ದ ಕಣ್ಣು. ಉದ್ದನೆ ಗಡ್ಡ. ಕೆನ್ನೆಯ ಮೇಲೊಂದಿಷ್ಟು ತರಚುಗಾಯ. ಮೋರೆ ಮಾತ್ರ ನಿಸ್ಸೀಮವಾದೊಂದು ನೆಮ್ಮದಿಯೊಳಗದ್ದಿ ಮಿಂದೆದ್ದು ಬಂದ ನೈದಿಲೆಯಂತಿತ್ತು.

'ಆಮೇಲೆ...?' ರುದ್ರನೀಲ ಥಾಪಸೆ, ಶರಣಪ್ಪನಿಗೆ ಮಾತು ಮುಂದುವರೆಸಹೇಳಿದ. ಅಷ್ಟರಲ್ಲಿ, ರೇಣು 'ಅದ್ಸರಿ ಶರಣಪ್ಪ... ನೀವು ಹೇಳುವಷ್ಟು ಕನ್ನಡ ಅವರಿಗೆ ಬರುತಿತ್ತಾ? ಅಥವಾ, ನಿಮಗೆ ಇಂಗ್ಲಿಷ್ ಬರುತ್ತಾ?' ಎಂದು ಭಾರೀ ಕುತೂಹಲ ತಾಳಿಕೊಂಡು ಕೇಳಿದಳು.

'ಎಲ್ಲೇಡಂ... ನಂಗೆಲ್ಲಿಂಗ್ಲೀಷ್ ಬಂದೀತು... ಚೂರುಪಾರು ಅರ್ಥ ಆಗ್ತಿತ್ತು. ಆದರೆ ಅವರೇ ನನಗೆ ತಿಳಿಹೇಳೋ ಅಷ್ಟು ಕನ್ನಡ ಕಲಿತಿದ್ದರು...'

'ಸರಿ... ಇವರು ಸತ್ತಿದ್ದು ನಿಮಗೆ ಹೇಗೆ ಗೊತ್ತಾಯಿತು?'

'ಎಂದಿನಂತೆ ಬೆಳಿಗ್ಗೆ ನಾಕೂವರೆಗೆದ್ದು, ಟೀ ಮಾಡಿಕೊಂಡು ಬಂಡೆ ಹತ್ತಿರ ಹೋದೆ... ಕಾಣಿಸಲಿಲ್ಲ. ಆ ಹೊತ್ತಿಗೆಲ್ಲ ಎದ್ದು, ಬಂಡೆ ಮೇಲೆ ಕೂತು ಆಕಾಶ ನೋಡಿಕೊಂಡಿರೋದೇ ಅವರ ರೂಢಿ. ಸರಿ... ತೋಟ ಪೂರ್ತಿ ಸುತ್ತಾಡಿಕೊಂಡು ಬಂದೆ. ಎಲ್ಲೂ ಕಾಣಿಸಲಿಲ್ಲ... ಅಯ್ಯೋ ಶಿವನೇ ಅಂದುಕೊಂಡು, ಬಂಡೆ ಆಚೆ ಬದಿಗೊಂದು ಬಾವಿ ಇದೆಯಲ್ಲ, ಅದರ ಹತ್ತಿರ ಹೋದರೆ, ಬಿಟ್ಟಿರೋ ಮೆಟ್ಟು ಇಟ್ಟಲ್ಲೇ ಸಿಕ್ಕವು... ಬಾಗಿ ನೋಡುತೀನಿ, ಆ ಮಬ್ಬುಗತ್ತಲಲ್ಲೂ ಅವರುಟ್ಟಿದ್ದ ಬಿಳೀಬಟ್ಟೆ ಕಾಣಿಸಿತು... ಎದೆ ಕುಸಿದುಹೋಯಿತು. ಡೇವಿಡ್ ಸಾರ್... ಅಂತ ಕಿರಿಚಿಕೋತಾ ಅತ್ತುಬಿಟ್ಟೆ...' ಶರಣಪ್ಪ ದುಗುಡದ ನಡುವೆ, ಗದ್ಗದ ತಾಳುತ್ತ ಸುಧಾರಿಸಿಕೊಂಡು ಹೇಳಿದ. 'ಸರೀ... ಪಕ್ಕದ ತೋಟದ ಗಂಡಾಳುಗಳನ್ನು ಕೂಗಿ ಕರೆದು ಎತ್ತಿದ್ದಾಯಿತು...'

ರುದ್ರನೀಲ ಥಾಪಸೆಗೆ ಎಲ್ಲವೂ ವಿಚಿತ್ರವಂತನ್ನಿಸಿತು. ವಿಷಯ ನಿಗೂಢವಂತನ್ನಿಸಿತು, ಫಕ್ಕನೆ ಆರ್ಥರ್ ಡೇವಿಡ್ ಹ್ಯೂಸ್‌ನ ಎಡದ ಮಣಿಕಟ್ಟಿನತ್ತ ಸರಿದು, ಪತ್ತೇದಾರನ ಹಾಗೆ, ವಾಚಿನಲ್ಲಿ ಕಣ್ಣಿಕ್ಕಿದ. ಲಂಡನ್‌ಮೇಕಿನ, ಸರಿಸುಮಾರು ನಲವತ್ತು ವರ್ಷಗಳ ಹಿಂದಿನ ಆ ವಾಚು ಸರಿಯಾಗಿ, ಹನ್ನೊಂದೂವರೆಯ ಸುಮಾರಿಗೆ ನಿಂತುಹೋಗಿತ್ತು! ರುದ್ರನೀಲ ಥಾಪಸೆಗೆ ಒಮ್ಮೊಂದೊಮ್ಮೆಗೇ ಎದೆಯಲ್ಲೇನೋ ಝಿಲ್ಲನಿಸಿತು. ದೇವರೇ... ಅದೇ ಹೊತ್ತಿಗಲ್ಲವೇ ನಿನ್ನೆ ರಾತ್ರಿ ತನಗೆ ಪದ್ಯದ ಸಾಲು ಹೊಳೆದಿದ್ದು? 'ಏನೂ ಇಲ್ಲದಲ್ಲಿಗೆ ಹೊರಟಿದ್ದೇನೆ... ಅಲ್ಲಿ ಇಲ್ಲವೆಂಬುದೂ ಇಲ್ಲ!!...' ಹೀಗನಿಸಿದ್ದೇ, ಅವನು ಇದ್ದಲ್ಲಿಯೇ ಮನಸ್ಸು ಜಡಿದು ಹೆಪ್ಪಿಕೊಂಡುಬಿಟ್ಟ! 'ನಂಬಲಿಕ್ಕಾಗಲ್ಲ, ರೇ... ಏನು ಗೊತ್ತಾ...' ಅಂತಂದು ವಿಷಯವನ್ನಾರಂಭಿಸಿ, 'ಈಗ ಬೇಡ ಬಿಡು... ವಾಪಸು ಹೋಗುವಾಗ ಹೇಳುತೀನಿ...' ಅಂತಂದ. ರೇಣುವೂ ಆ ಕ್ಷಣಕ್ಕೆ ಆ ಕುರಿತು ಕೆದಕಲಿಲ್ಲ. ಅವಳಿಗೆ ತನ್ನೀ ಗಂಡನ ಭಾವುಕತೆಯೇನೆಂದು ಚೆನ್ನಾಗಿ ಗೊತ್ತು. ಎಮೋಷನಿನ ಮೇಲೆಯೇ ಊರಿಕೊಂಡು ಬದುಕುದ್ದಕ್ಕು ಇದ್ದವನು... ಏಗಿದ್ದು ತಾನು! ಎಂತಲೇ, ಫಕ್ಕನೆ ಮಾತು ಬದಲಿಸುವ ಹಾಗೆ, 'ಶರಣಪ್ಪ ಅವರೇ... ನಿಮಗೆ ಬೆಳಬೆಳಿಗ್ಗೆ ನಮಗೆ ಫೋನು ಮಾಡಬೇಕೂಂತ ಹೇಗೆ ಹೊಳೀತು?' ಎಂದು ಶರಣಪ್ಪನನ್ನು ಕೇಳಿದಳು. 'ಎಂಟು ಗಂಟೆ ಆಗುತಾ ಬಂತು... ಮುಂದಿನ ವ್ಯವಸ್ಥೆ ಏನೂಂತ ಯೋಚಿಸಿದ್ದೀರಿ?...'